ನೀವು ಸಭಾಧ್ಯಕ್ಷರಾಗಿ ಇನ್ನು ಮುಂದೆ ಕೈಗೊಳ್ಳಬೇಕಾಗಿರುವ ತೀರ್ಮಾನ, ಸದನ ನಿಮಗೆ ಕೊಟ್ಟಿರುವ ಅಧಿಕಾರ ಯಾವುದಿದೆ, ಇದನ್ನು ಅನುಷ್ಠಾನಕ್ಕೆ ತರುವ ಕೆಲಸವನ್ನು ತಾವು ಸಭಾಧ್ಯಕ್ಷರಾಗಿ ಮಾಡಬೇಕೆಂದು ಸದನದ ಪರವಾಗಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇದು ಸರ್ಕಾರದ ಮತ್ತು ವಿರೋಧ ಪಕ್ಷದ ಪ್ರಶ್ನೆ ಅಲ್ಲ, ಸದನದ ಪ್ರಶ್ನೆಯನ್ನಾಗಿ ತೆಗೆದುಕೊಂಡಿದ್ದೇವೆ. ಇದು ವಿರೋಧ ಪಕ್ಷ ಮತ್ತು ಸರ್ಕಾರದ ಪ್ರಶ್ನೆ ಎಂದು ಹೇಳುತ್ತಿರುವಂಥಾದ್ದು, ಇದೊಂದು ಸರ್ಕಾರದ ಕಾರ್ಯಕ್ರಮ ಅಥವಾ ವಿರೋಧ ಪಕ್ಷಗಳ ಕಾರ್ಯಕ್ರಮ, ಅಥವಾ ವಿರೋಧ ಪಕ್ಷಗಳ ನಿಲುವಿಗೆ ಸರ್ಕಾರದ ಉತ್ತರವೆಂದಲ್ಲ. ಆದುದರಿಂದ, ಮಾನ್ಯ ಸದಸ್ಯರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಸದನದ ಪರವಾಗಿ ತಂದಿರುವ ನಿರ್ಣಯವೇನಿದೆ, ಇದು ಸದನದ ನಿರ್ಣಯವಾಗಿದೆಯೇ ವಿನಾಃ ಸರ್ಕಾರ ಅಥವಾ ವಿರೋಧ ಪಕ್ಷಗಳ ನಿರ್ಣಯವಲ್ಲವೆಂದು ಹೇಳಿ, ನಿರ್ಣಯವನ್ನು ಈ ಸಂದರ್ಭದಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಮುಂದಿನ ಕ್ರಮವನ್ನು ತಾವು ಕೈಗೊಳ್ಳಬೇಕೆಂದು ಸದನದ ಪರವಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಈಗ ಚರ್ಚೆ ಮುಗಿದಿದೆ. ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ :

"ದಿನಾಂಕ 3ನೇ ಸೆಪ್ಟೆಂಬರ್, 1997ರ ಪ್ರಕಟಣೆ, ಬೆಂಗಳೂರಿನಿಂದ ಪ್ರಕಟಿಸುವ ಲಂಕೇಶ್ ವಾರಪತ್ರಿಕೆ' ಯ ಪ್ರಕಾಶಕರು, ಸಂಪಾದಕರು ಹಾಗೂ ವರದಿಗಾರರು ಈ ಸದನದ ಕೆಳಕಂಡ ಗೌರವಾನ್ವಿತ ಮಹಿಳಾ ಸದಸ್ಯರುಗಳ ಹಕ್ಕುಚ್ಯುತಿ ಎಸಗಿದ್ದಾರೆ.

1. ಶ್ರೀಮತಿ ಪ್ರಮೀಳಾ ನೇಸರ್ಗಿ
2. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್
3. ಶ್ರೀಮತಿ ವಿಮಲಾಬಾಯಿ ದೇಶಮುಖ್
4. ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ
5. ಶ್ರೀಮತಿ ಡಿ.ಜಿ. ಹೇಮಾವತಿ
6. ಶ್ರೀಮತಿ ಎನ್.ಜ್ಯೋತಿರೆಡ್ಡಿ ಹಾಗೂ

ಈ ಸದನದ ಹಕ್ಕಿಗೂ ಸಹ ಚ್ಯುತಿ ಎಸಗಿದ್ದಾರೆಂದು ಈ ಸದನ ಭಾವಿಸುತ್ತದೆ. ದಿನಾಂಕ 6ನೇ ಸೆಪ್ಟೆಂಬರ್ 1997ರಂದು ಅಥವಾ ಅದಕ್ಕೂ ಮೊದಲು ಪತ್ರಿಕೆಯ ಪ್ರಕಾಶಕರು, ಸಂಪಾದಕರು ಹಾಗೂ ವರದಿಗಾರರು ಈ ಬಗ್ಗೆ ತಮ್ಮ ವಿವರಣೆ ನೀಡಬೇಕೆಂದು ಸಹ ನಿರ್ಣಯಿಸುತ್ತದೆ. ಅವರ ಹೇಳಿಕೆ ಪಡೆದ ನಂತರ ಈ ಸದನ ಸೂಕ್ತ ಕ್ರಮ ಕೈಗೊಳ್ಳಬಹುದು.

ಪ್ರಸ್ತಾವ ಅಂಗೀಕರಸಲ್ಪಟ್ಟಿತು

ಪ್ರಕಟಣೆ

ಅಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ.

ದಿನಾಂಕ 27ನೇ ಆಗಸ್ಟ್, 1997ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ 28.8.1997 ರಿಂದ 12.9.1997ರವರೆಗೆ ಈ ಕೆಳಕಂಡಂತೆ ಕಾರ್ಯ ಕಲಾಪಗಳನ್ನು ನಡೆಸಲು ತೀರ್ಮಾನಿಸಲಾಯಿತು.

28.8.97 ಗುರುವಾರ ಹಾಗೂ 29.8. 97 ಶುಕ್ರವಾರ	1) ಪ್ರಶ್ನೋತ್ತರ 2) ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು
30.8.97 ಶನಿವಾರ	ಉಪವೇಶನ ಇರುವುದಿಲ್ಲ
31.8.97 ಭಾನುವಾರ	ರಜಾದಿನ
1.9.97 ಸೋಮವಾರ ಹಾಗೂ 2.9.97 ಮಂಗಳವಾರ	ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು
3.9.97 ಬುಧವಾರ	ಶಾಸನ ರಚನೆ : 1) ಧನ ವಿನಿಯೋಗ. ವಿಧೇಯಕ ಮಂಡನೆ ಹಾಗೂ ಅಂಗೀಕಾರ 2) ಪೂರಕ ಅಂದಾಜುಗಳ (ಮೊದಲೇ ಕಂತು) ಚರ್ಚೆ ಹಾಗೂ ಅಂಗೀಕಾರ 3) ಹೆಚ್ಚುವರಿ ಅನುದಾನ ಬೇಡಿಕೆಗಳ ಚರ್ಚೆ ಹಾಗೂ ಅಂಗೀಕಾರ 4) ಪೂರಕ ಹಾಗೂ ಹೆಚ್ಚುವರಿ ಬೇಡಿಕೆಗಳಿಗೆ ಸಂಬಂಧಿಸಿದಂತೆ ಧನ ವಿನಿಯೋಗ ವಿಧೇಯಕಗಳು ಹಾಗೂ ತೆರಿಕೆ ವಿಧೇಯಕಗಳ ಮಂಡನೆ ಹಾಗೂ ಅಂಗೀಕಾರ
4.9.97 ಗುರುವಾರ	ಶಾಸನ ರಚನೆ - ತೆರಿಗೆ ವಿಧೇಯಕಗಳು ದಿನಾಂಕ 4.9.97 ರಂದು ಸದನವನ್ನು ಮುಂದೂಡಿ ದಿನಾಂಕ 8.9.97ರಂದು ಸಮಾವೇಶಗೊಳ್ಳುವುದು
8.9.97 ರಿಂದ 12.9.97ರವರೆಗೆ	ಶಾಸನ ರಚನೆ

ಈ ಶಿಫಾರಸ್ಸುಗಳನ್ನು ಸದನ ಅಂಗೀಕರಿಸುತ್ತದೆಂದು ಭಾವಿಸುತ್ತೇನೆ. ಈ ದಿವಸಕ್ಕೆ ನಿರ್ಣಯಿಸಿದ ಎರಡು ಗಮನ ಸೆಳೆಯುವ ಸೂಚನೆಗಳನ್ನು ನಾಳೆ ತೆಗೆದುಕೊಳ್ಳುತ್ತೇನೆ, ಇದಕ್ಕೆ ಮಾನ್ಯ ಸದಸ್ಯರುಗಳು ದಯಮಾಡಿ ಸಹಕರಿಸಬೇಕು.

ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಪುನಃ ನಾಳೆ ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಸಂಜೆ 8 ಗಂಟೆ 20 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 29ನೇ ಆಗಸ್ಟ್ ಮಾಹೆ 1997ರ ಶುಕ್ರವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)